# ‘ಜಿಲ್ಲೆಗೊಂದು ಶೂಟಿಂಗ್ ರೇಂಜ್ ಕಷ್ಟವಲ್ಲ’: ಕೋಚ್ ಆನಂದ್

Updated: Feb 13, 2013, 04:21AM IST

SUBSCRIBE NEWSLETTER



‘ಜಿಲ್ಲೆಗೊಂದು ಶೂಟಿಂಗ್ ರೇಂಜ್ ಕಷ್ಟವಲ್ಲ’: ಕೋಚ್ ಆನಂದ್

*** ಸೋಮಶೇಖರ್ ಪಡುಕರೆ, ಬೆಂಗಳೂರು**

ಶೂಟಿಂಗ್ ಕಲಿಕೆ ಅತ್ಯಂತ ಸುಲಭವಾದುದು. ಶೂಟಿಂಗ್ ರೇಂಜ್ ಸ್ಥಾಪಿಸಲು ಹೆಚ್ಚು ವೆಚ್ಚವೂ ಆಗುವುದಿಲ್ಲ. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶೂಟಿಂಗ್ ರೇಂಜ್‌ಗಳನ್ನು ನಿರ್ಮಿಸಬೇಕಾದ ಅನಿವಾರ್ಯತೆ ಇದೆ ಎನ್ನುವುದು ಖ್ಯಾತ ಶೂಟಿಂಗ್ ಕೋಚ್ ಆನಂದ್ ಸಿ.ಕೆ. ಅಭಿಪ್ರಾಯ.

ಹದಿಮೂರು ಬಾರಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದು, ಅಂತಾರಾಷ್ಟ್ರೀಯ ಶೂಟಿಂಗ್ ಫೆಡರೇಷನ್‌ನ ತೀರ್ಪುಗಾರರಾಗುವ ಅರ್ಹತೆ ಪಡೆದಿರುವ ಮೈಸೂರಿನ ಆನಂದ್ ಕೆ.ಸಿ. ಅವರಿಗೆ ಶೂಟಿಂಗ್ ಎಂದರೆ ಅಪಾರ ಪ್ರೀತಿ. ಆದ್ದರಿಂದಲೇ ಈ ಕ್ರೀಡೆಯ ಏಳಿಗೆಗಾಗಿ ಕಳಕಳಿ ಹೊಂದಿದ್ದಾರೆ.

'ವಿಜಯ ಕರ್ನಾಟಕ'ದೊಂದಿಗೆ ಮಾತನಾಡಿದ ಅವರು ''ಶೂಟಿಂಗ್ ಕಲಿಕೆಗೆ ಏಕಾಗ್ರತೆ ಹಾಗೂ ದೇಹದ ನಿಯಂತ್ರಣವಿದ್ದರೆ ಸಾಕು. ಇತರ ಕ್ರೀಡೆಗಳಂತೆ ಹೆಚ್ಚು ಶ್ರಮವಹಿಸಬೇಕಾದ ಅಗತ್ಯವಿರುವುದಿಲ್ಲ. ರಾಜ್ಯದಲ್ಲಿ ಸಾಕಷ್ಟು ಮೂಲಭೂತ ಸೌಕರ್ಯ ಇಲ್ಲದ ಕಾರಣ ಯಾರೂ ಈ ಕ್ರೀಡೆಯಲ್ಲಿ ಆಸಕ್ತಿ ತೋರುತ್ತಿಲ್ಲ. ಈ ಕಾರಣಕ್ಕಾಗಿಯೇ ಯುವಜನರಿಗೆ ನೆರವಾಗಲೆಂದು ಕೃತಿಯೊಂದನ್ನು ರಚಿಸಿದೆ,'' ಎಂದಿದ್ದಾರೆ.

Latest Comment

ಆನಂದ್ ಬಗ್ಗೆ ಲೇಖನ ಓಧಿ ತುಂಬ ಸಂತೋಷವಾಯಿತು. ನಮ್ಮ ಸರ್ಕಾರ ಅವರಿಂಧ ಲಾಭ ಪಡೆಯುವಧು ಮುಖ್ಯ. ಅವರನ್ನು ರಾಜ್ಯೆದ ತರಪೇತುಧರರಣ್ಣಾಗಿ ಮಾದಬೇಕು. ಮನ್ನಾರಿ

*Balakrishna Y N*

0 | 0 | 0 ಉತ್ಕೃಷ್ಟ | ಆಕ್ಷೇಪಾರ್ಹ

All Comments Write Comments

ಆನಂದ್ ಅವರ 'ಟೆನ್ ಎಕ್ಸ್' ಕೃತಿಯನ್ನು ಆಧರಿಸಿ ಭಾರತೀಯ ಕ್ರೀಡಾ ಪ್ರಾಧಿಕಾರ ಇನ್ನು ಮುಂದೆ ಬೆಂಗಳೂರಿನಲ್ಲಿ ರಾಜ್ಯದ ಯುವ ಶೂಟರ್‌ಗಳಿಗೆ ಅನುಕೂಲವಾಗುವಂತೆ ಶೂಟಿಂಗ್‌ನಲ್ಲಿ ಡಿಪ್ಲೊಮಾ ತರಬೇತಿ ನೀಡಲು ತೀರ್ಮಾನಿಸಿದೆ.

''ರೈಫಲ್ ಶೂಟಿಂಗ್‌ಗೆ ಹೆಚ್ಚಿನ ಸ್ಥಳಾವಕಾಶದ ಅಗತ್ಯವಿರುವುದಿಲ್ಲ. ಕಡಿಮೆ ಸ್ಥಳಾವಕಾಶದಲ್ಲೂ ಹಾಗೂ ಕಡಿಮೆ ವೆಚ್ಚದಲ್ಲೂ ಪುಟ್ಟ ಶೂಟಿಂಗ್ ರೇಂಜ್ ಸ್ಥಾಪಿಸಿ ಯುವಕರಿಗೆ ತರಬೇತಿ ನೀಡಬಹುದು. ಈ ಕ್ರೀಡೆಯ ಬಗ್ಗೆ ಇರುವ ತಪ್ಪು ಗ್ರಹಿಕೆ ದೂರವಾಗಬೇಕು. ಶೂಟಿಂಗ್ ಎಂದರೆ ಅದೊಂದು ಅಪಾಯಕಾರಿ ಕ್ರೀಡೆ ಎಂದು ಕೆಲವರು ಹೇಳುತ್ತಾರೆ. ಅದು ಜನರ ಮನಸ್ಸಿನಿಂದ ದೂರವಾಗಬೇಕೆಂಬುದು ನನ್ನ ಉದ್ದೇಶವಾಗಿದೆ,''ಎಂದು ಆನಂದ್ ಹೇಳಿದರು.

ಅರಣ್ಯ ಇಲಾಖೆಯ ಸಿಬ್ಬಂದಿಗೆ ಹಾಗೂ ಹವ್ಯಾಸಿ ಯುವಕರಿಗೆ ತರಬೇತಿ ನೀಡುತ್ತಿರುವ ಆನಂದ್ ಅವರು ರಾಷ್ಟ್ರೀಯ ರೈಫಲ್ ಅಸೋಸಿಯೇಷನ್‌ನಲ್ಲಿ ಕೋಚ್ ಆಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. 26 ಬಾರಿ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಗೆದ್ದಿರುವ ಇವರು ಖಾಸಗಿ ಕಂಪೆನಿಯೊಂದರ ನಿರ್ದೇಶಕರೂ ಆಗಿದ್ದಾರೆ.

ರಾಜ್ಯದಲ್ಲಿ ಶೂಟಿಂಗ್ ತರಬೇತಿ ನೀಡಲು ಸಾಕಷ್ಟು ಪ್ರಮಾಣದಲ್ಲಿ ನುರಿತ ತರಬೇತುದಾರರಿಲ್ಲ. ಗುಲ್ಬರ್ಗ, ಧಾರವಾಡ, ಶಿವಮೊಗ್ಗ, ಮಂಗಳೂರು, ಬೆಳಗಾವಿ ಮೊದಲಾದ ಜಿಲ್ಲೆಗಳಲ್ಲಿ ಅನೇಕ ಯುವಕರು ಶೂಟಿಂಗ್ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅದರೆ ಅವರಿಗೆ ತರಬೇತಿ ಪಡೆಯಲು ಸೂಕ್ತವಾದ ಶೂಟಿಂಗ್ ರೇಂಜ್‌ಗಳೇ ಇಲ್ಲ. ರಾಜ್ಯ ಸರಕಾರ ಈ ನಿಟ್ಟಿನಲ್ಲಿ ಮುತುವರ್ಜಿ ವಹಿಸಿ ಪ್ರತಿಯೊಂದು ಜಿಲ್ಲೆಗಳಲ್ಲೂ ಶೂಟಿಂಗ್ ರೇಂಜ್ ಸ್ಥಾಪಿಸಲು ಮುಂದಾಬೇಕಾದ ಅಗತ್ಯವಿದೆ ಎಂದು ಅವರು ಆಶಿಸಿದ್ದಾರೆ.

ಶೂಟರ್‌ಗಳಿಗೆ ಕೈಪಿಡಿಯಂತಿರುವ ತಮ್ಮ '10 ಎಕ್ಸ್' ಕೃತಿಯ ಬಗ್ಗೆ ಮಾತನಾಡಿದ ಆನಂದ್, ''ಸುಮಾರು ಆರು ವರ್ಷಗಳಿಂದ ಈ ಕೃತಿಯನ್ನು ರಚಿಸಬೇಕೆಂಬ ಹಂಬಲ ಹೊಂದಿದ್ದೆ. ಅದೇ ರೀತಿಯಲ್ಲಿ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದೆ, ಈ ಕೃತಿ 335 ಪುಟಗಳಿಂದ ಕೂಡಿದೆ. ಹವ್ಯಾಸಿ ಶೂಟರ್‌ಗಳಿಂದ ಹಿಡಿದು ವೃತ್ತಿಪರ ಶೂಟರ್ ಆಗುವವರೆಗೂ ಈ ಕೃತಿ ಉಪಯೋಗಕ್ಕೆ ಬರುತ್ತದೆ. ಇದನ್ನೇ ಗಮನಿಸಿಕೊಂಡು ಭಾರತೀಯ ಕ್ರೀಡಾ ಪ್ರಾಧಿಕಾರ ಡಿಪ್ಲೊಮಾ ಕೋರ್ಸ್ ನೀಡಲು ಮುಂದಾಗಿದೆ,'' ಎಂದರು.

ಕರ್ನಾಟಕದಲ್ಲಿ ಶೂಟರ್‌ಗಳ ಕೊರತೆ ಇರುವುದರ ಬಗ್ಗೆ ಮಾತನಾಡಿದ ಅವರು ''ಈಗ ಪ್ರತಿಯೊಂದು ಕ್ರೀಡೆಯಿಂದ ಆರ್ಥಿಕವಾಗಿ ಬೇಗನೆ ಲಾಭ ಪಡೆಯುವುದು ಹೇಗೆ ಎಂದು ಮೊದಲು ಯೋಚಿಸುತ್ತಾರೆ. ಆಗ ಕ್ರಿಕೆಟ್ ಎಲ್ಲರನ್ನೂ ಆಕರ್ಷಿಸುತ್ತದೆ. ಈ ಕಾರಣದಿಂದಾಗಿ ಶೂಟಿಂಗ್ ಸೇರಿದಂತೆ ಹೆಚ್ಚಿನ ಕ್ರೀಡೆಗಳ ಕಡೆಗೆ ಯುವಕರು ಗಮನ ಹರಿಸುವುದು ಕಡಿಮೆಯಾಗುತ್ತಿದೆ. ಇದು ಈ ನಮ್ಮ ದೇಶದ ಕ್ರೀಡಾ ದುರಂತ,'' ಎಂದು ಅವರು ಆತಂಕ ವ್ಯಕ್ತಪಡಿಸಿದರು.

**ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ ಮತ್ತು ತಾಜಾ ಅಪ್‌ಡೇಟ್ಸ್ ಪಡೆಯುತ್ತಾ ಇರಿ**

**ತಾಜಾ ಸುದ್ದಿಗಾಗಿ ವಿಕ ಫೇಸ್‌ಬುಕ್ ಪುಟ ಲೈಕ್ ಮಾಡಿ.**

**Web Title:**

(Kannada News from vijaykarnataka , TIL Network)

Get Sports News in Kannada, Cricket News in Kannada, Olympics News in Kannada. Stay updated with us to get latest cricket Latest Kannada News